ಸದಸ್ಯರ ವೈಯಕ್ತಿಕ ಹೇಳಿಕೆ

ಶ್ರೀ ಕೆ. ಪ್ರತಾಪ ಚಂದ್ರಶೆಟ್ಟಿ.—ಮಾನ್ಯ ಅಧ್ಯಕ್ಷರೆ.....

ಅಧ್ಯಕ್ಷರು.—ಸ್ವಲ್ಪ ಕೂಡಿ ಹೇಳಿಂತ್ತೀನಿ.

ಶ್ರೀ ಕೆ. ಪ್ರತಾಪ ಚಂದ್ರಶೆಟ್ಟಿ.—ಏಕೆ ?

ಅಧ್ಯಕ್ಷರು.—ಅವರು ಏನು ಹೇಳಿದ್ದಾರೆಂದರೆ ಶ್ರೀಮತಿ ಚತುರೆಯವರಿಗೆ ಒಂದು ಮನೆ ಮತ್ತು ಒಂದು ಸೈಟು ಇದೆ ಎಂದು ಹೇಳಿದ್ದಾರೆ. ಶ್ರೀಮತಿ ಚತುರೆಯವರು ಏನು ಹೇಳುತ್ತಾರೆಂದರೆ, ನನಗೆ ಎರಡು ಇಲ್ಲ, ಒಂದು ಮನೆ ಮಾತ್ರ ಇದೆ, ಒಂದುವೇಳೆ ಒಂದು ಸೈಟು ಇದೆ ಎಂದು ಸಿದ್ದಮಾಡಿದರೆ ನಾನು ರಾಜಿನಾಮೆ ಕೊಡುತ್ತೇನೆ, ಇಲ್ಲಾ ಅಂದರೆ ಅವರು ರಾಜಿನಾಮೆ ಕೊಡಬೇಕು ಎಂದು ಹೇಳಿದ್ದಾರೆ. ಅವರು ನನ್ನ ಛೇಂಬರಿನಲ್ಲಿ ಹೇಳಿದ್ದಾರೆ ಒಂದುವೇಳೆ ಒಂದು ಸೈಟು ಒಂದು ಮನೆ ಇತ್ತು ಅಂದರೆ ರೈಟಿಂಗ್‌ನಲ್ಲಿ ಕೊಡಿ ಎಕ್ಸ್‌ಪ್ಲಿನ್ ಮಾಡುವುದಾಗಿ ಹೇಳಿದೆ. ಒಂದುವೇಳೆ ಆರೋಪ ಸಿದ್ಧ ಮಾಡಿದರೆ ನಾನು ರಾಜಿನಾಮೆ ಕೊಡುತ್ತೇನೆ, ಇಲ್ಲದಿದ್ದರೆ ಅವರು ರಾಜಿನಾಮೆ ಕೊಡಬೇಕು ಎಂದೆ ಹೇಳಿದ್ದಾರೆ. ಅದು ಏನೇ ಇರಲಿ, ನಿಮ್ಮನ್ನು ಕರೆದು ಡಿಸ್ಕಸ್ ಮಾಡಬೇಕಾಗುತ್ತದೆ. ಹೊಸಬರು. ನೀವು ಕಲ್ಪನೆ ಇಲ್ಲ. ಮಾನ್ಯ ಮೊಯಿಲಿಯವರನ್ನು ಕರೆದುಕೊಂಡು ಬನ್ನಿ ಮಾತನಾಡುತ್ತೇನೆಂದು ಹೇಳಿದೆ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ.—ಮಾನ್ಯ ಅಧ್ಯಕ್ಷರೇ, ನಾನು ಹೇಳಿಬಿಡುತ್ತೇನೆ.

(ಗೊಂದಲ)

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮಾನ್ಯ ಅಧ್ಯಕ್ಷರೇ ಈಗ ಅವರು ಎದ್ದುನಿಂತುಕೊಂಡು ಹೇಳಿಬಿಟ್ಟರು. ಎರಡು ನಿಮಿಷದಲ್ಲಿ ಎಕ್ಸ್‌ಪ್ಲನೇಷನ್ ಹೇಳುತ್ತಾರೆ ಕೇಳಿಬಿಡಿ. ಅದು ರಿಕಾರ್ಡ್‌ನಲ್ಲಿ ಹೋಗಿದೆ.....

ಅಧ್ಯಕ್ಷರು.—ಪರ್ಸನಲ್ ಎಕ್ಸ್‌ಪ್ಲನೇಷನ್ ಅದರಲ್ಲಿ ಏನೂ ಇಲ್ಲ. ಅವರು ಒಂದೇ ಒಂದು ಮನೆ ಇದೆ, ಒಂದು ಮನೆ, ಒಂದು ಸೈಟು ಇದೆಯೆಂದು ಇವರು ಸಿದ್ಧ ಮಾಡಿದರೆ ನಾನು ರಾಜೀನಾಮೆ ಕೊಡುತ್ತೇನೆಂದು ಹೇಳಿದ್ದಾರೆ.

ಆಕಸ್ಮಾತ್ ಇನ್ನೊಂದು ಸೈಟ್ ಇದ್ದರೆ, ಆ ರೀತಿ ಅವರು ಬರೆದು ಕೊಡಲಿ ಈ ಪ್ರಕರಣವನ್ನು ಮುಂಕ್ತಾಯ ಮಾಡೋಣ ಇದನ್ನು ಮುತ್ತೆ ಬೆಳೆಸುವುದು ಬೇಡ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಬೆಳೆಸುವುದು ಒಳ್ಳೆಯದಲ್ಲ. ಅವರು ಹೇಳಿದ್ದಾರೆ ಅದಕ್ಕೆ ಅವರು ಎಕ್ಸ್‌ಪ್ಲನೇಷನ್ ಕೊಡುವುದು ಬೇಡವೇ ?

ಅಧ್ಯಕ್ಷರು.—ನೀವು ಹೊಸಬರಿದ್ದೀರಿ ಮಾನ್ಯ ಮೊಯಿಲಿಯವರನ್ನು ಕರೆದುಕೊಂಡು ಬನ್ನಿ ಕೂತುಕೊಂಡು ಮಾತನಾಡೋಣ ಎಂದು ಹೇಳಿದ್ದೇನೆ.

ಶ್ರೀ ಎಂ. ವೀರಪ್ಪಮೊಯಿಲಿ.—ವಿಷಯ ನಿನ್ನೆ ಪ್ರಸ್ತಾಪವಾಗಿದೆ. ನಿನ್ನೆ ಸಂಜೆಯೊಳಗೆ ಅವರು ಎಕ್ಸ್‌ಪ್ಲನೇಷನ್ ಕೊಡಬೇಕಾಗಿತ್ತು. ಬೇಜವಾಬ್ದಾರಿಯಿಂದ ಸದಸ್ಯರು ಹೇಳಿಕೆ ಕೊಟ್ಟರೆ ತಪ್ಪಾಗುತ್ತದೆ ಅವರು ನಿನ್ನೆ ಕೊಡಬೇಕಾಗಿತ್ತು ನಿನ್ನೆ ಕೊಡಲಿಲ್ಲ ಇವತ್ತು ಕೊಟ್ಟಿದ್ದಾರೆ, ಅದಕ್ಕೆ ಇವರು ಕೂಡ ಎಕ್ಸ್‌ಪ್ಲನೇಷನ್ ಕೊಡಬೇಕಾಗುತ್ತದೆ.

ಅಧ್ಯಕ್ಷರು.—ನೀವು ಅವರು ಏನು ಕೊಟ್ಟಿದ್ದಾರೆ ಎನ್ನುವುದನ್ನು ನೋಡಿ.

ಶ್ರೀ ಎಂ. ವೀರಪ್ಪಮೊಯಿಲಿ.—ನೋಡಿದ್ದೇನೆ ಸರಿಯಾಗಿದೆ.

ಅಧ್ಯಕ್ಷರು.—ಡಿಸ್‌ಕಷನ್ ಮುಂಗಿಯುವುದರೊಳಗೆ.....

ಶ್ರೀ ಎನ್. ಎಂ. ಅಡ್ಯಂತಾಯ.—ಇದು ಸದನಕ್ಕೆ ಗೊತ್ತಾಗಬೇಕು.

ಅಧ್ಯಕ್ಷರು.—ಸದನಕ್ಕೆ ಗೊತ್ತಾಗಬೇಕೆದು ನಾನು ಹೇಳುತ್ತಿದ್ದೇನೆ. ಉತ್ತರವನ್ನು ಬೇಜವಾಬ್ದಾರಿಯಿಂದ ಕೊಡುವುದಕ್ಕಾಗುವುದಿಲ್ಲ ಅವರು ಹೊಸಬರಿದ್ದಾರೆ.

ಶ್ರೀ ಎನ್. ಎಂ. ಅಡ್ಯಂತಾಯ.—ಅವರು ಹೊಸಬರಲ್ಲ.

ಅಧ್ಯಕ್ಷರು.—ನೀವು ಕಲಿಯುಬೇಕು ನಾವು ಕಲಿಯಬೇಕು. ಕಲಿಯುವುದು ಬಹಳ ಇದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ, ಪ್ರಿವಿಲೇಜ್ ಇಷ್ಯೂ ಮೇಲೆ ಕಂಟೆವರ್ಟ್ ಆಫ್ ದಿ ಹೌಸ್.....

ಅಧ್ಯಕ್ಷರು.—ಒಂದುಕಡೆಯಿಂದ ಹೋಗೋಣ. ಇವತ್ತೇ ತೆಗೆದುಕೊಳ್ಳೋಣ.....ಈಗ ಒಂದು ಪ್ರಕಟಣೆಯನ್ನು ಮಾಡುತ್ತೇನೆ.....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇವತ್ತು ತೆಗೆದುಕೊಳ್ಳುತ್ತೇನೆಂದು ತಾವು ಹೇಳಿದ್ದೀರಿ.

ಅಧ್ಯಕ್ಷರು.—ಟೈಂ ಇದ್ದರೆ ನೋಡೋಣ ಈಗ ಒಂದುಕಡೆಯಿಂದ ಹೋಗೋಣ ನೀವೆಲ್ಲಾ ಬಂದು ಗಲಾಟೆ ಮಾಡುವುದು ಬೇಡ. ಆ ಪದ್ಧತಿ ಸರಿಯಲ್ಲ ನಿಮಗೆ ನಾನು ಏನು ಹೇಳುತ್ತಿದ್ದೇನೆಂದರೆ you should not take law into your own hands. Might is right ಅಂತ ಹೋಗಬಾರದು ನಿಮಗೆ ಸಾಕಷ್ಟು ಅವಕಾಶವನ್ನು ನಾನು ಕೊಡುತ್ತೇನೆ ಅಲ್ಲಿ ತಾವು ಕೂತು ಎಷ್ಟು ಹೊತ್ತು ಬೇಕಾದರೂ ಮಾತನಾಡಿ ಆದರೆ ಇಲ್ಲಿ ಅಧ್ಯಕ್ಷರ ಪೀಠದ ಹತ್ತಿರ ಬಂದು ಗಲಾಟೆ ಮಾಡುವುದು ಬೇಡ, ಆ ಪದ್ಧತಿ ಸರಿಯಲ್ಲ ನೀವು ಅಲ್ಲಿ ಬರುವುದು, ಇಲ್ಲಿ ಬರುವುದು ಅಂದರೆ ಏನು ಅದರ ಅರ್ಥ ? ಶ್ರೀಮತಿ ನಾಗರತ್ನಮ್ಮನವರು ಇಲ್ಲಿ ೬ ವರ್ಷ ಇದ್ದರು ನಾನೂ ಎಂ.ಎಲ್.ಎ. ಆಗಿ ನೋಡಿದ್ದೇನೆ. ಅವರು ಸಭೆಯನ್ನು ಚೆನ್ನಾಗಿ ನಡೆಸುತ್ತಿದ್ದರು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಲ್ಲಿ ಬಂದು ಯಾರು ಮೈಕ್ ಕಿತ್ತು ಬಿಸಾಕಿದರೊ ಅವರಿಗೆ ಹೇಳಿ.....

(ಗೊಂದಲ)

ಅಧ್ಯಕ್ಷರು.—ಅವರು ಇಲ್ಲಿ ಇದ್ದಾಗ ತಪ್ಪು ಮಾತಾಡಿರಬಹುದು, ಸಾಗರ್‌ರವರು ಮಾಡಿದ್ದಾರೆ, ಬೊಮ್ಮಾಯಿಯವರು ಮಾಡಿದ್ದಾರೆ ಎಂದು ತಾವೂ ಸಹ ಅದೇ ರೀತಿ ತಪ್ಪು ಮಾಡಲಿಕ್ಕೆ ಹೋಗಬಾರದು. ಈಗ ಪ್ರಕಟಣೆಯನ್ನು ಹೇಳುತ್ತೇನೆ.

(ಗೊಂದಲ)

ಪ್ರಕಟಣೆ—೧

ಅಧ್ಯಕ್ಷರು.—ಪ್ರಕಟಣೆ—೧, ವಿಧಾನ ಪರಿಷತ್ತಿನ ಸಭಾಪತಿಯವರಿಂದ ಈ ಕೆಳಕಂಡ ಸಂದೇಶ ಬಂದಿದೆ.

"ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯ ವಿಧಾನ ಹಾಗೂ ನಡವಳಿಕೆಯ ನಿಯಮ ೧೧೪ರ ಮೇರೆಗೆ ವಿಧಾನ ಸಭೆಯಿಂದ ಅಂಗೀಕರಿಸಲಾದ ಈ ಕೆಳಕಂಡ ವಿಧೇಯಕಗಳನ್ನು ಕರ್ನಾಟಕ ವಿಧಾನ ಪರಿಷತ್ತಿನಲ್ಲಿ ೧೩-೧೧-೧೯೮೮ರಂದು ಅನುಮೋದಿಸಲಾಯಿತು ಎಂದು ತಿಳಿಸುತ್ತೇನೆ.

ಅ) ೧೯೮೮ನೇ ಇಸವಿಯ ಭೂಸ್ವಾಧೀನ (ಕರ್ನಾಟಕ ತಿದ್ದುಪಡಿ)

ಆ) ೧೯೮೮ನೇ ಇಸವಿಯ ಕರ್ನಾಟಕ ಸಿವಿಲ್ ನ್ಯಾಯಾಲಯಗಳ ಶಾಸನ (ತಿದ್ದುಪಡಿ) ವಿಧೇಯಕ

ಇ) ೧೯೮೮ನೇ ಇಸವಿಯ ಕರ್ನಾಟಕ ಕುಷ್ಠ ರೋಗ ಶಾಸನಗಳ (ನಿರಸನ) ವಿಧೇಯಕ

ಈ) ೧೯೮೮ನೇ ಇಸವಿಯ ಕರ್ನಾಟಕ ನ್ಯಾಯಾಲಯ ಶುಲ್ಕ ಹಾಗೂ ದಾವೆಗಳ ಮೌಲ್ಯ ಮಾಪನ (ತಿದ್ದುಪಡಿ) ವಿಧೇಯಕ."